





ಆ ಗುಳ್ಳೆಗಳೊಂದಿಗೆ ಕಪ್ಪೆಗಳ ಜೋರು ಕೂಗೂ ಕೇಳಿಸುತ್ತದೆ. ಹತ್ತಾರು ಗಂಡು ಕಪ್ಪೆಗಳು ಬೇರೆ ಬೇರೆಯಾಗಿ ಕೂತು, ಪ್ರತಿಸ್ಪರ್ಧಿಗಳಂತೆ ಒಂದರ ನಂತರ ಮತ್ತೊಂದು ಕೂಗಾಡಿ, ಹೆಣ್ಣನ್ನು ಕೂಟಕ್ಕೆ ಆಹ್ವಾನಿಸುತ್ತವೆ.

ಪ್ರತಿಯೊಂದು ಕಪ್ಪೆಗಳ ಜಾತಿಗೆ ತನ್ನದೇ ಆದ ಪ್ರತ್ಯೇಕ ಕೂಗಾಟದ ಕರೆ ಇದೆ. ಹೆಣ್ಣು ಕಪ್ಪೆಗಳು ತಮ್ಮ ಜಾತಿಗಳ ಗಂಡು ಕಪ್ಪೆಗಳು ಹೊರಹೊಮ್ಮಿಸುವ ಕೂಟ ಕರೆಯ ಸ್ವರವನ್ನು ಆಲಿಸಿ ಗುರುತಿಸುವ ಸಾಮರ್ಥ್ಯವನ್ನು ಹೊಂದಿವೆ.

ಕರೆಗೆ ಆಕರ್ಷಿತವಾಗುವ ಹೆಣ್ಣು ಕಪ್ಪೆ ಗಂಡಿನ ಸನಿಹಕ್ಕೆ ಬರುತ್ತದೆ. ತಕ್ಷಣವೇ ಗಂಡು ಅದರ ಬೆನ್ನೇರಿ ಕುಳಿತು ತನ್ನ ಮುಂಗಾಲುಗಳನ್ನು ಹೆಣ್ಣಿನ ಹೊಟ್ಟೆಗೆ ಬಿಗಿದಪ್ಪಿ ಹಿಡಿಯುತ್ತದೆ. ಮುಂದಿನದು ಮಿಲನ ಸುಖ.

ಗಂಡು ಕಪ್ಪೆ, ಹೆಣ್ಣಿನ ಬೆನ್ನನ್ನು ತಬ್ಬಿ ಹಿಡಿದು ಸವಾರಿ ಮಾಡುತ್ತ ಕಿಬ್ಬೊಟ್ಟೆಯ ಭಾಗವನ್ನು ಒತ್ತಿದಾಗ ಹೆಣ್ಣು ಅಂಡಾಣುಗಳನ್ನು ನೀರಿನಲ್ಲಿ ಸ್ರವಿಸುತ್ತಿದ್ದವು. ಗಂಡೂ ಸಹ ವೀರ್ಯಾಣುಗಳನ್ನು ಸ್ರವಿಸುತ್ತಿತ್ತು. ವೀರ್ಯಾಣುಗಳು ಅಂಡಾಣುವನ್ನು ಫಲಿತಗೊಳಿಸುತ್ತವೆ. ದೇಹದ ಹೊರಭಾಗದಲ್ಲಿ ನಡೆಯುವ ಈ ಕ್ರಿಯೆಗೆ 'ಬಾಹ್ಯ ನಿಶೇಚನ ಕ್ರಿಯೆ' ಎನ್ನುವರು. ನಾನು ಅವುಗಳ ಎಲ್ಲ ಚಟುವಟಿಕೆಗಳನ್ನು ಕ್ಯಾಮೆರಾದಲ್ಲಿ ದಾಖಲಿಸಿಕೊಳ್ಳುವುದರೊಂದಿಗೆ ವಿಡಿಯೊ ಮಾಡಿಕೊಂಡೆ. ಆಸಕ್ತರು ವಿಡಿಯೊ ತುಣುಕನ್ನು ನೋಡಬಹುದು: **youtube.com/watch?v=zHIdTvtZQVM**

ಗೂಳಿ ಕಪ್ಪೆಗಳನ್ನು ಗ್ವಾಕರ ಕಪ್ಪೆ, ಗ್ವಟರ್ ಕಪ್ಪೆಗಳೆಂತಲೂ ಕರೆಯುವರು. ಇಂಗ್ಲಿಷಿನಲ್ಲಿ 'ಇಂಡಿಯನ್ ಬುಲ್ ಫ್ರಾಗ್' ಎಂದು ಹೆಸರು. ಗೋಲ್ಡನ್ ಫ್ರಾಗ್, ಟೈಗರ್ ಫ್ರಾಗ್ ಎಂದೂ ಹೆಸರಿಸಿ, ಪ್ರಾಣಿಶಾಸ್ತ್ರೀಯವಾಗಿ 'ಹಾಪ್ಲೊಬ್ಯಾಟ್ರಾಕಸ್ ಟೈಗೇರಿನಸ್', 'ರಾಣಾ ಟೈಗೇರಿನಾ', 'ರಾಣಾ ಟೈಗ್ರೀನಾ' ಎಂದು ನಾಮಕರಣ ಮಾಡಲಾಗಿದೆ; ಉಭಯವಾಸಿಗಳ 'ಆಂಫಿಬಿಯಾ' ವರ್ಗದ, 'ಅನುರಾ' ಗಣದ, 'ಡಿಕ್ರೊಗ್ಲೋಸಿಡೇ' ಕುಟುಂಬಕ್ಕೆ ಸೇರಿಸಲಾಗಿದೆ.

ಕಪ್ಪೆಗಳ ಪ್ರಣಯಾಟ ಮುಂದುವರೆದಿತ್ತು. ಆ ಆಟವನ್ನು ನೋಡಲೆಂಬಂತೆ ಬಾನಲ್ಲಿ ಮೋಡಗಳು ದಟ್ಟೈಸುತ್ತಿದ್ದವು.

ಪ್ರತಿಕ್ರಿಯಿಸಿ: **feedback@sudha.co.in**

